

# ಸಾಬೂನ್ ತೇಲ್ ತಾರೆಯರು...

## ಸುಭಾಷ್ ಘಾಯ್ ಟೀಕೆ–ಟಿಪ್ಪಣಿ

■ ವಿಶಾಖ ಎನ್.

‘ಈಗಿನ ಹಿಂದಿ ಚಲನಚಿತ್ರಗಳ ನಟರು ಸಾಬೂನ್ ತೇಲ್ ಸ್ಟಾರ್‌ಗಳು’ – ಹೀಗೆಂದು ಎಪ್ಪತ್ತೇಳು ವಯಸ್ಸಿನ ನಿರ್ದೇಶಕ–ನಿರ್ಮಾಪಕ ಸುಭಾಷ್ ಘಾಯ್ ಇತ್ತೀಚೆಗೆ ಕೆಂಡ ಕಾರಿದರು.

ಸಿನಿಮಾ ನಿರ್ಮಾಣದಲ್ಲಿ ಇಂದಿಗೂ ಸಕ್ರಿಯರಾಗಿರುವ ಸುಭಾಷ್ ಘಾಯ್, 1969ರಲ್ಲಿ ‘ಆರಾಧನಾ’ ಹಿಂದಿ ಚಲನಚಿತ್ರದಲ್ಲಿ ಸಣ್ಣ ಪಾತ್ರವೊಂದರ ಮೂಲಕ ಚಿತ್ರರಂಗಕ್ಕೆ ಕಾಲಿಟ್ಟವರು. ಪುಣೆಯ ಟೆಲಿವಿಷನ್ ಅಂಡ್ ಫಿಲ್ಮ್ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾದಲ್ಲಿ ಕಲಿತ ಅವರು, ಸೂಪರ್‌ಹಿಟ್ ಸಿನಿಮಾಗಳನ್ನು ಕೊಟ್ಟವರು. ಇಪ್ಪತ್ತೆರಡು ವರ್ಷಗಳ ಹಿಂದೆ ‘ಮುಕ್ತ ಆರ್ಟ್ಸ್ ಪ್ರೈವೇಟ್ ಲಿಮಿಟೆಡ್’ ಎಂಬ ಚಿತ್ರನಿರ್ಮಾಣ ಸಂಸ್ಥೆಯನ್ನೂ ಹುಟ್ಟುಹಾಕಿದವರು. ಆಸಕ್ತಿಕರ ವಿಷಯವೆಂದರೆ, ಕನ್ನಡದ ‘ನಿಂಬೆಹುಳಿ’ ಚಲನಚಿತ್ರವನ್ನೂ ಅವರು ನಿರ್ಮಿಸಿದ್ದಾರೆ. ಹೇಮಂತ್ ಹೆಗಡೆ ನಿರ್ದೇಶನದ ಸಿನಿಮಾ ಅದು.

ಹೊಸ ತಲೆಮಾರಿನ ಬಹುತೇಕ ಹುಡುಗ–ಹುಡುಗಿಯರಿಗೆ ಸುಭಾಷ್ ಘಾಯ್ ಪರಿಚಯ ತಲಸ್ಪರ್ಶಿಯಾಗಿ ಇದ್ದಿರಲಾರದು. ಯಾಕೆಂದರೆ, 2008ರಲ್ಲಿ ‘ಯುವರಾಜ್’ ಬಂದಮೇಲೆ ಅವರು ಮತ್ತೊಂದು ಸಿನಿಮಾ ನಿರ್ದೇಶಿಸಿದ್ದು 2014ರಲ್ಲಿ; ‘ಕಾಂಚಿ: ದಿ ಅನ್‌ಬ್ರೇಕಬಲ್’ ಮೂಲಕ. ಅದಾದಮೇಲೆ ಸಿನಿಮಾ ನಿರ್ಮಾಣ ಮುಂದುವರಿಸಿರುವರೇ ವಿನಾ ನಿರ್ದೇಶನದ ಉಸಾಬರಿಯನ್ನು ಹೊರುತ್ತಿಲ್ಲ. ಅನಿಲ್ ಕಪೂರ್, ಜಾಕಿ ಶ್ರಾಫ್, ಶಾರುಖ್ ಖಾನ್ ತರಹದವರು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ, ಅವರ ಯಶಸ್ಸಿನ ಗ್ರಾಫ್ ಅನ್ನು ಮೇಲಕ್ಕೇರಿಸಿದವರಲ್ಲಿ ಒಬ್ಬರು. ಸಾಮಾಜಿಕ ಕಳಕಳಿಯ ಕಾರಣಕ್ಕೆ ಅವರ ನಿರ್ಮಾಣದ ‘ಇಕ್ಬಾಲ್’ ಹಿಂದಿ ಚಲನಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ಕೂಡ ಸಂದಿತು. ಅದರ ನಿರ್ದೇಶಕ ನಾಗೇಶ್ ಕುಕನೂರ್. ಬರೀ ನಟ–ನಟಿಯರನ್ನಷ್ಟೆ ಅಲ್ಲದೆ ಯುವ ನಿರ್ದೇಶಕ–ಬರಹಗಾರರನ್ನೂ ಸುಭಾಷ್ ಹೇಗೆ ಬೆಳೆಸಿದ್ದರೆನ್ನುವುದಕ್ಕೆ ಇವೆಲ್ಲ ಉದಾಹರಣೆಗಳು.

ಇಂತಿಪ್ಪ ಸುಭಾಷ್ ಅವರಿಗೆ ಇತ್ತೀಚಿನ ತಾರಾ ವರ್ಚಸ್ಸಿನ ನಟ–ನಟಿಯರ ಬಗೆಗೆ ಸಿಟ್ಟಿದೆ. ಹೊಸ ತಲೆಮಾರಿನವರು ಸಿನಿಮಾ ಬಗೆಗೆ ಹೆಚ್ಚು ಒತ್ತುನೀಡದೆ, ವೈಯಕ್ತಿಕ ಹಣ ಗಳಿಕೆಗೇ ಆದ್ಯತೆ ನೀಡುತ್ತಿದ್ದಾರೆನ್ನುವುದು ಅವರ ಸಿಟ್ಟಿಗೆ ಕಾರಣ.

‘ಶಾರುಖ್ ಖಾನ್, ಸಲ್ಮಾನ್ ಖಾನ್ ಹಾಗೂ ಅಮೀರ್ ಖಾನ್ ಮೂವರೂ ಚಿತ್ರಕಥೆಗೆ ಬೇಕಾದಂತಹ ಸಿದ್ಧತೆಯಲ್ಲಿ ತೊಡಗುತ್ತಿದ್ದರು. ತಮ್ಮನ್ನು ತಾವು ಒಳ್ಳೆಯ ಚಲನಚಿತ್ರಗಳಿಗೆ ಅರ್ಪಿಸಿಕೊಳ್ಳುತ್ತಿದ್ದರು. ಈಗಿನ ನಟ–ನಟಿಯರಲ್ಲಿ ಆ ಗುಣವಿಲ್ಲ. ಸಿನಿಮಾ ಚಿತ್ರೀಕರಣಕ್ಕೆ ಕಾಲ್‌ಷೀಟ್ ನೀಡಿದ ಅವಧಿಯಲ್ಲೇ ಜಾಹೀರಾತು ಚಿತ್ರೀಕರಣಕ್ಕೆಂದು ಎರಡು–ಮೂರು ದಿನ ಬ್ರೇಕ್ ತೆಗೆದುಕೊಂಡು, ಹೋಗಿ ಬರುವ ಜಾಯಮಾನದವರು ಇವರು. ತಾವು ಚೆನ್ನಾಗಿ ಕಾಣಬೇಕು, ಹಾಗೆ ಕಾಣುವುದರಿಂದ ಮಾರುಕಟ್ಟೆಯಲ್ಲಿ ಚಾಲ್ತಿಯಲ್ಲಿ ಇರಬೇಕು, ಒಂದಾದಮೇಲೆ ಒಂದರಂತೆ ಜಾಹೀರಾತು ಸಿಗುತ್ತಿರಬೇಕು ಎನ್ನುವುದು ಇಂಥವರ ಮೂಲಮಂತ್ರವಾಗಿದೆ. ಹೀಗಾಗಿಯೇ ಇವರೆಲ್ಲ ಸಾಬೂನ್ ತೇಲ್ ಸ್ಟಾರ್‌ಗಳು ಅರ್ಥಾತ್ ಸೋಪು, ತೈಲ ಮಾರುವಂಥ ಸ್ಟಾರ್‌ಗಳು’ ಎಂದು ಸುಭಾಷ್ ಮಾತಿನ ಚಾಟಿ ಬೀಸಿದರು.

ಇಂತಹ ತಾರೆಯರಿಗೆ ಬಲಕ್ಕೆ ಹೋಗಬೇಕೋ, ಎಡಕ್ಕೆ ಹೋಗಬೇಕೋ ಎಂದು ಸೂಚಿಸುವಂಥ ಮಾರುಕಟ್ಟೆ ಪ್ರಣೀತ ಪಟಾಲಂ ಕೂಡ ಇರುತ್ತದೆನ್ನುವುದು ಈ ಹಿರಿಯ ನಿರ್ದೇಶಕರ ಅಭಿಮತ. ಸದ್ಯಕ್ಕೆ ‘36 ಫಾರ್ಮ್‌ಹೌಸ್’ ಎಂಬ ಹಿಂದಿ ಚಲನಚಿತ್ರ ನಿರ್ಮಿಸುತ್ತಿರುವ ಸುಭಾಷ್, ‘ಹಿಂದಿ ಚಿತ್ರರಂಗಕ್ಕೆ ಬಾಲಿವುಡ್ ಎಂಬ ಹೆಸರು ಬಂದಮೇಲೆ ಪಾಶ್ಚಾತ್ಯ ಆಲೋಚನೆಯ ಅನುಕರಣೆ ಶುರುವಾಯಿತು’ ಎಂದೂ ಮಾತು ಸೇರಿಸಿದರು.

ದೇಸಿ ಆಲೋಚನೆಯಲ್ಲಿ ಚಿತ್ರಕಥೆಗಳು ಮೂಡದೆ ಪಾಶ್ಚಾತ್ಯ ಧಾಟಿಯ ಅನುಕರಣೆಗೆ ಇಳಿದ ಪರಿಣಾಮವೇ ಇವತ್ತಿನ ಗುಣಮಟ್ಟದ ಅಧೋಗತಿಗೆ ಕಾರಣವೆನ್ನುವುದು ಅವರ ಅಂಬೋಣ.

ದಕ್ಷಿಣ ಭಾರತದ ಸಿನಿಮಾಗಳು ವಸ್ತುವಿಷಯ ಹಾಗೂ ದೇಸಿ ಮಾರುಕಟ್ಟೆಯನ್ನು ವಿಸ್ತರಿಸಿಕೊಳ್ಳುತ್ತಿರುವ ಸನ್ನಿವೇಶದಲ್ಲಿ ಸುಭಾಷ್ ಘಾಯ್ ಮಾತುಗಳಿಗೆ ತೂಕವಿದೆ. ಥಳುಕು ಬಳುಕಿನ ತಾರೆಯರಿಗೆ ಸಿನಿಮಾವನ್ನೇ ಉಸಿರಾಡಿದ ಇಂತಹ ಹಿರಿಯರ ಕಿವಿಮಾತು ನಾಟಬೇಕಷ್ಟೆ.

‘ಹೀರೊ’ (ಇದೇ ಕನ್ನಡದಲ್ಲಿ ‘ರಣಧೀರ’ ಆದದ್ದು), ‘ರಾಮ್ ಲಖನ್’, ‘ಸೌದಾಗರ್’, ‘ಖಳ್‌ನಾಯಕ್’, ‘ಪರ್ದೇಸ್’, ‘ತಾಲ್’ ತರಹದ ವೈವಿಧ್ಯಮಯ ಸಿನಿಮಾಗಳಿಗೆ ಚಿತ್ರಕಥೆ ಬರೆದು, ನಿರ್ದೇಶಿಸಿದವರು ಇದೇ ಸುಭಾಷ್ ಘಾಯ್. ■